ದಿನಾಂಕಃ 21-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ ಸಿ ಕೆ ವಕೀಲರಿಂದ.

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-16 ಎಂದು ಗುರುತಿಸಲಾಯಿತು. ನಾನು ನಡೆಸುತ್ತಿದ್ದ ವಾಹನದ ಆರ್ ಸಿ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ.

ಆದ್ದರಿಂದ ನಾನು ಕೋರಲಾದಂತೆ ಅರ್ಜಿಯನ್ನು ಖರ್ಚು ಸಹಿತ ಮಂಜೂರು ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀಸವಾಲುಃ- ಎದುರುದಾರರ ನಂ.2 ಪರ ಶ್ರೀ. ಎಮ್ ಜಿ ಹೆಚ್ ವಕೀಲರಿಂದ.

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನನ್ನ ತಮ್ಮ ಮಹಾಂತೇಶ ಕೊಟ್ಟಿರುತ್ತಾರೆ. ಅಪಘಾತದ ಕುರಿತು ದೂರನ್ನು ಮಹಾಂತೇಶ ಇವರು ಸಲ್ಲಿಸಿರುತ್ತಾರೆ ಎಂದರೆ ಸರಿ. ಈ ಅರ್ಜಿಯಲ್ಲಿ ಸಲ್ಲಿಸಲಾದ ಕಾಗದ ಪತ್ರಗಳ ಮಾಹಿತಿ ಗೊತ್ತಿರುತ್ತದೆ. ಅಪಘಾತವು ಕಾರಿನ ಚಾಲಕ ನಮ್ಮ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿದ್ದರಿಂದ ಆಗಿರುತ್ತದೆ. ಆ ದಿವಸ ದ್ವಿಚಕ್ರ ವಾಹನದ ಮೇಲೆ ನನ್ನ 2 ಮಕ್ಕಳು ಮತ್ತು ನನ್ನ ತಂದೆ ಹೊರಟಿದ್ದು ಇತ್ತು. ನನ್ನ ತಮ್ಮ ನೀಡಿದ ದೂರಿನಲ್ಲಿ ನನ್ನ ಹೆಂಡತಿಯೂ ಸಹ ದ್ವಿಚಕ್ರ ವಾಹನದ ಮೇಲೆ ಪ್ರಯಾಣಿಸುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರು ಶೋಭಾ ಇರುತ್ತದೆ. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡುವ ಪರವಾನಿಗೆ ಪತ್ರ ಇತ್ತು. ಅದನ್ನು ಈ ಅರ್ಜಿಯಲ್ಲಿ ಹಾಜರುಪಡಿಸಿರುತ್ತೇನೆ. ಹಾಗೇ ವಾಹನ ಚಾಲನೆ ಮಾಡುವ ಪರವಾನಿಗೆ

ಪತ್ರವನ್ನು ಹಾಜರುಪಡಿಸಿರುವುದಾಗಿ ಮುದ್ದಾಮ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ವಾಹನ ಚಾಲನೆ ಮಾಡುವ ಪರವಾನಿಗೆ ಪತ್ರ ಇರಲಿಲ್ಲ, ವಾಹನಕ್ಕೆ ವಿಮೆ ಇರಲಿಲ್ಲ ಎಂದು ಪೊಲೀಸರು ನನ್ನ ಮೇಲೆ ಅಪಾದನೆ ಮಾಡಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಕುಂದಗೋಳ ಜೆಎಮ್‌ಎಫ್‌ಸಿ ನ್ಯಾಯಾಲಯದಲ್ಲಿ ನನ್ನ ಮೇಲೆ ಪ್ರಕರಣ ವಿಚಾರಣೆಯಲ್ಲಿರುತ್ತದೆ ಎಂದರೆ ಸರಿ. ಆದ್ದರಿಂದ ಅಪಘಾತ ನನ್ನ ದುಡುಕುತನದ ವಾಹನ ಚಾಲನೆಯಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಯಾರಿಗೂ ದತ್ತು ಹೋಗಿಲ್ಲ. ನನ್ನ ಪಹಕಣಿಯಲ್ಲಿ ನನ್ನ ಹೆಸರು ಶಿವಾನಂದ ದತ್ತಕ ತಂದೆ ಈರಪ್ಪ ಅಕ್ಕೂರ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಶಿಗ್ಗಾಂವ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಕಾಗದ ಪತ್ರ ಹಾಜರುಪಡಿಸಿಲ್ಲ. ನಿಪಿ-16 ರಲ್ಲಿ ನನಗೆ ಯಾವುದೇ ಮೂಳೆ ಮುರಿತ ಆಗಿಲ್ಲ ಎಂದು ಕಾಣಿಸಲಾಗಿರುತ್ತದೆ ಎಂದರೆ ಸರಿ. ನನಗೆ ತಲೆಗೆ ಬಲವಾದ ಪೆಟ್ಟು ಆಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಸಾದಾ ಸ್ವರೂಪದ ಗಾಯಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಖರ್ಚು ರೂ. ಒಂದು ಲಕ್ಷ ಆಗಿರುತ್ತದೆ ಎಂದು ತೋರಿಸಲು ಬಿಲ್ಲುಗಳನ್ನು ಹಾಜರುಪಡಿಸಿಲ್ಲ. ಅಪಘಾತವಾದಾಗ ನನ್ನ ವಯಸ್ಸು 33 ಇತ್ತು. ಆಗ ನನ್ನ ವಯಸ್ಸು 40 ಇತ್ತು ಎಂದರೆ ಸರಿಯಲ್ಲ. ನಾನು ಪ್ರತಿ ತಿಂಗಳು ರೂ.30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೇ ಆದಾಯ ಇತ್ತು ಎಂದು ತೋರಿಸಲು ಬ್ಯಾಂಕ್ ಪಾಸಪುಸ್ತಕ ಹಾಜರುಪಡಿಸಿಲ್ಲ. ಅಪಘಾತವು ನನ್ನ ತಪ್ಪಿನಿಂದಲೇ ಆಗಿದ್ದರೂ ನಾನು ಮತ್ತು ನನ್ನ ತಮ್ಮ ಮಹಾಂತೇಶ 1 ನೇ ಎದುರುದಾರರ ವಾಹನ ಚಾಲಕನ ಮೇಲೆ ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಕಾರಿನ ಚಾಲಕನಿಗೆ ವಾಹನ ಚಾಲನೆ ಪರವಾನಿಗೆ ಪತ್ರ ಮತ್ತು ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಂ ವಿ ಸಿ ನಂ. 366/2024
ಪಿ.ಡಬ್ಲು- 2

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).